ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಧಿಂ.ನ್ಯಾಯಾಲಯ, ಕೆ.ಆರ್.ನಗರ

ಸಿ ಸಿ ನಂ. **147/2017**

| | | |
|---|---|---|
| ಸಾಕ್ಷಿಯ ಹೆಸರು | ಹರ್ಷವರ್ಧನ್ | |
| ತಂದೆಃ ಗಂಡ ಹೆಸರು | ವಾಸುದೇವ್ | |
| ವಯಸ್ಸು | 33 ವರ್ಷ | |
| ಉದ್ಯೋಗ | ವ್ಯವಸ್ಥಾಪಕರು, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ | ಪಿ ಡಬ್ಲ್ಯೂ 2 |
| ವಾಸ ಸ್ಥಳ | ಮೈಸೂರು | |

ದಿನಾಂಕ ಃ **26-12-2019** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

(

ಮುಖ್ಯ ವಿಚಾರಣೆ ಃ ಪಿರ್ಯಾದುದಾರರ ಪರ ಶ್ರೀಮತಿ ಕೆ ಪಿ ವಕೀಲರಿಂದ,

ನಾನು ಮೈಸೂರಿನ ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಬ್ಯಾಂಕಿನಲ್ಲಿ 2019 ಜುಲೈ ತಿಂಗಳಿನಿಂದ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ನ್ಯಾಯಾಲಯದಿಂದ ಸಾಕ್ಷ್ಯ ನುಡಿಯಲು ಸಮನ್ಸ್ ಬಂದಿತ್ತು. ಅದರಂತೆ ಆರೋಪಿ ಕುಮಾರ್ ರವರ ಖಾತೆ ತೆರೆಯುವಾಗ ನೀಡಿದ ಸಿಗ್ನೇಚರ್ ಕಾರ್ಡ್ ನ ಎರಡು ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಮತ್ತು 7 ಎಂದು ಗುರುತಿಸಲಾಯಿತು. ಮತ್ತು ಅವರಿಗೆ ಚೆಕ್ ಬುಕ್ಕನ್ನು ನೀಡಿದ ಬಗ್ಗೆ ಲೆಡ್ಜರ್ ನ್ನು ನಿಡಿ 8 ಎಂದು ಗುರುತಿಸಲಾಯಿತು. ಆರೋಪಿಯ ಖಾತಾ ಎಕ್ಸ್ ಟ್ರಾಕ್ಟ್ ನ್ನು ನಿಪಿ 9 ಎಂದು ಗುರುತಿಸಲಾಯಿತು. ನಿಪಿ 1 ಕುಮಾರ್ ರವರ ಖಾತೆಗೆ ಸಂಬಂಧಪಟ್ಟ ಚೆಕ್ ಇರುತ್ತದೆ. ಮೇಲ್ನೋಟಕ್ಕೆ ನಿಪಿ 1 ರಲ್ಲಿರುವ ಸಹಿ ಮತ್ತು ಸಿಗ್ನೇಚರ್ ಕಾರ್ಡ್ ನಲ್ಲಿರುವ ಸಹಿಗಳು ತಾಳೆಯಾಗುತ್ತವೆ. ನಿಪಿ 2 ನಮ್ಮ ಶಾಖೆಯಿಂದ ನೀಡಿದ ಹಿಂಬರಹ ಇರುತ್ತದೆ.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಂ ಸಿ ವಿ ಕೆ ವಕೀಲರಿಂದ,

ನಿಪಿ 2 ರಲ್ಲಿ ಒಂದು ಕಾರಣವನ್ನು ಮಾತ್ರ ನಮೂದಿಸಿದ್ದೇವೆ ಎಂದರೆ ಸರಿ. ಎಲ್ಲಾ ಕಾರಣಗಳಿರುವ ಹಿಂಬರಹದ ಪ್ರತಿಯನ್ನು ನಾವು ಕೊಡಬಹುದಿತ್ತು ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಶಾಖೆಯಲ್ಲಿ ಯಾವ ಕಾರಣಕ್ಕಾಗಿ ಚೆಕ್ಕು ಅಮಾನ್ಯಗೊಳ್ಳುತ್ತಿದೆ ಎನ್ನುವ ಒಂದೇ ಕಾರಣವನ್ನು ಹಿಂಬರಹದಲ್ಲಿ ನೀಡುವ ಅವಶ್ಯಕತೆ ಇರುತ್ತದೆ. ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದ ಸಮಯದಲ್ಲಿ ಆ ಒಂದೇ ಕಾರಣಕ್ಕೆ ಚೆಕ್ಕನ್ನು ಅಮಾನ್ಯಗೊಳಿಸಲಾಗುತ್ತದೆ. ನಿಪಿ 1 ಚೆಕ್ಕಿನಲ್ಲಿರುವ ಸಹಿ ಮತ್ತು ನಿಪಿ 6 ಮತ್ತು 7 ರಲ್ಲಿರುವ ಸಹಿಗಳು ಬೇರೆ ಬೇರೆ ಇವೆ ಎಂದರೆ ಸರಿಯಲ್ಲ.

ಸಾಕ್ಷಿ ಆ ಎರಡೂ ಸಹಿಗಳು ಒಂದೇ ಇವೆ ಎಂದು ನುಡಿಯುತ್ತಾರೆ. ಸಹಿಗಳನ್ನು ತಾಳೆ ಮಾಡುವ ಬಗ್ಗೆ ನನಗೆ ತರಬೇತಿ ಆಗಿಲ್ಲ ಆದರೆ ನಾವೇ ಸಹಿಗಳನ್ನು ತಾಳೆ ಮಾಡಿ ಹಿಂಬರಹ ನೀಡುತ್ತೇವೆ. ಪಿರ್ಯಾದುದಾರರಿಗೆ ಅಕ್ರಮ ಲಾಭ ಮಾಡಿಕೊಡುವ ಉದ್ದೇಶದಿಂದ ನಿಪಿ 2 ರಂತೆ ಸುಳ್ಳು ಹಿಂಬರಹವನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ನೀಡಿದ ಚೆಕ್ ಪುಸ್ತಕದಲ್ಲಿನ ಇತರೆ ಎಷ್ಟು ಚೆಕ್ಕುಗಳನ್ನು ಪಡೆದುಕೊಂಡಿದ್ದೇವೆ ಎಂದು ಈಗ ಹೇಳಲಾಗುವುದಿಲ್ಲ. ನಾನು ಪಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.